ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: shq@bsgkarnataka.org / shanthigruha@scout.org.inಅಂತರ್ಜಾಲ: www.bsgkarnataka.in

ಸಂಖ್ಯೆ:ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/ಜಾಂಬೂರೇಟ್/130/2025-26/1693 ದಿನಾಂಕ: 29.11.2025

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್
ಜಿಲ್ಲಾ ಸಂಸ್ಥೆ, ಕರ್ನಾಟಕ.

ಮಾನ್ಯರೆ,

ವಿಷಯ:– 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್–ಗೈಡ್ಸ್ ಜಾಂಬೋರೇಟ್‌ನಲ್ಲಿ ಭಾಗವಹಿಸುವ ಸ್ಕೌಟ್ಸ್–ಗೈಡ್ಸ್ ಮತ್ತು ಶಿಕ್ಷಕರುಗಳ ನೊಂದಣಿ ಮತ್ತು ಶಿಬಿರ ಶುಲ್ಕವನ್ನು ಪಾವತಿಸುವ ಕುರಿತು.

ಉಲ್ಲೇಖ:– ರಾಜ್ಯ ಸಂಸ್ಥೆಯ ಸುತ್ತೋಲೆ ಸಂಖ್ಯೆ:ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/ಜಾಂಬೂರೇಟ್/130/2025–26/1555 ದಿನಾಂಕ: 17.11.2025

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಹಾಗು ಬೆಳಗಾವಿ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್–ಗೈಡ್ಸ್ ಜಾಂಬೋರೇಟ್ ಅನ್ನು ಫೀನಿಕ್ಸ್ ಪಬ್ಲಿಕ್ ಶಾಲೆ, ಹೊನಗಾ, ಬೆಳಗಾವಿ ಜಿಲ್ಲೆ ಇಲ್ಲಿ ದಿನಾಂಕ 27.12.2025 ರಿಂದ 01.01.2026ರವರೆಗೆ ಆಯೋಜಿಸಲಾಗಿದೆ.

ಸದರಿ ಜಾಂಬೂರಿಯಲ್ಲಿ ಭಾಗವಹಿಸುವ ಪ್ರತಿ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರುಗಳಿಗೆ ನೊಂದಣಿ ಶುಲ್ಕ ತಲಾ ರೂ.100/– ಮತ್ತು ಶಿಬಿರ ಶುಲ್ಕ (ಊಟ, ಉಪಹಾರ) ರೂ.600/–ಗಳು ಒಟ್ಟು ರೂ.700/–ಗಳನ್ನು ಸಂಗ್ರಹಿಸುವಂತೆ ಈಗಾಗಲೇ ಮೇಲ್ಕಂಡ ಉಲ್ಲೇಖದಲ್ಲಿ ತಿಳಿಸಿ ಸುತ್ತೋಲೆಯನ್ನು ಕಳುಹಿಸಲಾಗಿತ್ತು.

ಮುಂದುವರೆದು, ತಮ್ಮ ತಮ್ಮ ಜಿಲ್ಲೆಯಿಂದ 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್–ಗೈಡ್ಸ್ ಜಾಂಬೋರೇಟ್‌ನಲ್ಲಿ ಭಾಗವಹಿಸುವ ಸ್ಕೌಟ್ಸ್–ಗೈಡ್ಸ್ ಮತ್ತು ಶಿಕ್ಷಕರುಗಳಿಂದ ಸಂಗ್ರಹವಾದ ಒಟ್ಟು ಮೊತ್ತವನ್ನು ಈ ಕೆಳಕಂಡ ಖಾತೆಗೆ ಜಮೆ ಮಾಡಲು ಕೋರಲಾಗಿದೆ.

| | |
|---|---|
| BANK NAME | : BHARAT SCOUTS & GUIDES DIST ASSOSIATION |
| BANK A/C NO | : 374102010034209 |
| IFSC CODE | : UBIN0537411 |
| BRANCH | : TILAKWADI, BELGAUM |
| Phone No | : 9591957003,9980881848 |

ಜಾಂಬೋರೇಟ್‌ನಲ್ಲಿ ಭಾಗವಹಿಸುವ ಸ್ಕೌಟ್ಸ್–ಗೈಡ್ಸ್ ಮತ್ತು ಶಿಕ್ಷಕರುಗಳ ನೊಂದಣಿ ಶುಲ್ಕ ಮತ್ತು ಶಿಬಿರ ಶುಲ್ಕದ ಮೊತ್ತವನ್ನು ದಿನಾಂಕ:10.12.2025ರ ಒಳಗಾಗಿ ಮೇಲ್ಕಂಡ ಖಾತೆಗೆ ಜಮೆ ಮಾಡಲು ತಿಳಿಸಿದೆ. ಹೀಗೆ ಖಾತೆಗೆ ಹಣವನ್ನು ಜಮೆ ಮಾಡಿರುವ ಸ್ಕೌಟ್ಸ್–ಗೈಡ್ಸ್ ಮತ್ತು ಶಿಕ್ಷಕರುಗಳ ವಿವರಗಳು ಪಟ್ಟಿ ಮತ್ತು ಬ್ಯಾಂಕಿಗೆ ಆರ್.ಟಿ.ಜಿ.ಎಸ್. ಮೂಲಕ ಜಮೆ ಮಾಡಿರುವ ಯು.ಟಿ.ಆರ್. ಸಂಖ್ಯೆ ವಿವರಗಳನ್ನು ಜಿಲ್ಲಾ ಕಾರ್ಯದರ್ಶಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಕೌಟ್ ಭವನ, ರಾಯ್ ರೋಡ್, ತಿಲಕವಾಡಿ, NEAR VAXNE DEPPO, ಬೆಳಗಾವಿ ಇವರಿಗೆ ಕಳುಹಿಸುವುದರೊಂದಿಗೆ, ಅದರ ಒಂದು ಪ್ರತಿಯನ್ನು ರಾಜ್ಯ ಕಾರ್ಯದರ್ಶಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ನಂ.39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು ಈ ವಿಳಾಸಕ್ಕೆ ತಪ್ಪದೇ ಕಳುಹಿಸಲು ತಿಳಿಸಿದೆ.

ಸ್ಕೌಟ್–ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ.ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

**ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ:–**

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಬೆಳಗಾವಿ ಜಿಲ್ಲೆ
2. ಎಎಸ್‌ಓಸಿ/ ಡಿಒಟಿ/ ಡಿಒ/ ಎಸ್‌ಜಿವಿ/ಎಸ್‌ಜಿವಿ, ಭಾ.ಸ್ಕೌ&ಗೈ